# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-8248/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:21.3.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ.ಕೃಷ್ಣಪ್ಪ ಬಿನ್ ಚಿಕ್ಕಣ್ಣ, ಮಾದಾಪುರ ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ಕೃಷ್ಣಪ್ಪ ಬಿನ್ ಚಿಕ್ಕಣ್ಣ, ಮಾದಾಪುರ ಕಸಬಾ ಹೋಬಳಿ, ರಾಮನಗರ ತಾಲ್ಲೂಕು, (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಭೂ ದಾಖಲೆಗಳ ಸಹಾಯಕ ನಿರ್ದೇಶಕರು (ಕಾ.ನಿ) ಉಪವಿಭಾಗಾಧಿಕಾರಿಗಳ ಕಛೇರಿ, ರಾಮನಗರ ಉಪವಿಭಾಗ, ರಾಮನಗರ ಮತ್ತು ಇತರರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ, ಕಸಬಾ ಹೋಬಳಿಯ ಕೇತೋಹಳ್ಳಿ ಗ್ರಾಮದ ಸ. ನಂ: 257ರ ಬಗ್ಗೆ ಜಿಲ್ಲಾಧಿಕಾರಿಗಳು ರಿವಿಜನ್ ಪಿಟಿಷನ್ 7/09-10ರಲ್ಲಿ ಪುನಃ ದುರಸ್ಥಿ ಮಾಡುವಂತೆ ಮತ್ತು ಸಾರ್ವಜನಿಕರ ಸಲುವಾಗಿ 20 ಅಡಿ ರಸ್ತೆಯನ್ನು ಸ. ನಂ: 257ರಲ್ಲಿ ಬಿಟ್ಟುಕೊಡುವಂತೆ ದಿ: 29.1.2011ರಂದು ಆದೇಶ ಮಾಡಿದ್ದಾರೆ. ಆದರೆ ಸ. ನಂ: 257 ರಿ. ದುರಸ್ತಿ ಆಗುತ್ತಿಲ್ಲ ಅಂತ ದೂರು ಸಲ್ಲಿಸಿದ್ದಾರೆ.

3. ಈ ದೂರನ್ನು ಗೌರವಾನ್ವಿತ ಲೋಕಾಯುಕ್ತರು ರಾಮನಗರ ಕ್ಯಾಂಪಿನಲ್ಲಿ ಸಾರ್ವಜನಿಕ ಕುಂದು ಕೊರತೆ ವಿಚಾರಿಸುತ್ತಿದ್ದಾಗ ಸಲ್ಲಿಸಲಾಗಿದ್ದು ತಹಶೀಲ್ದಾರ್ ಮತ್ತು ಎ.ಡಿ.ಎಲ್.ಆರ್ ರವರಿಗೆ 3 ತಿಂಗಳೊಳಗಾಗಿ ಕ್ರಮ ತೆಗೆದುಕೊಂಡು ವರದಿ ಸಲ್ಲಿಸಲು

ಆದೇಶಿಸಲಾಗಿತ್ತು 3 ತಿಂಗಳೊಳಗಾಗಿ ವರದಿ ಸಲ್ಲಿಕೆಯಾಗಿಲ್ಲ ಆದ್ದರಿಂದ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಅನುಪಾಲನ ವರದಿ ಸಲ್ಲಿಸಲು ಪತ್ರ ಬರೆಯಲಾಗಿದೆ. ಅವರು ತಮ್ಮ ವರದಿ ಸಲ್ಲಿಸಿದ್ದು ಅನುಪಾಲನ ವರದಿ ನೀಡಲು ವಿಳಂಬವಾಗಿದೆ. ಏಕೆಂದರೆ ಕೇತೋಹಳ್ಳಿ ಗ್ರಾಮದ ಸ. ನಂ: 119ರಲ್ಲಿ ದುರಸ್ತಿಯಾಗಿರುವ ಸ. ನಂ: 257 ಬಗ್ಗೆ ಜಿಲ್ಲಾಧಿಕಾರಿಗಳ ಆದೇಶವನ್ನು ಅನುಷ್ಠಾನಗೊಳಿಸಲು ತಹಶೀಲ್ದಾರ್ ರವರಿಗೆ ಆದೇಶಿಸಿದ್ದಾರೆ. ಗೋಮಾಳದಲ್ಲಿ ಹೊಸ ಸ. ನಂಬರ್ ಅಳತೆ ಮಾಡಿಸಿ ಪೋಡಿ ಕೆಲಸ ಮಾಡಬೇಕೆಂದರೆ ನಮೂನೆ 1-5ರವರೆಗೆ ತಹಶೀಲ್ದಾರ್ ರವರು ಭರ್ತಿ ಮಾಡಿ ಎ.ಸಿ., ಮೇಲು ಸಹಿ ಆಗಿ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರಿಗೆ ಮೇಲು ಸಹಿಗೆ ಕಳುಹಿಸಿ ವಾಪಸ್ಸು ಅಳತೆ ಕಾರ್ಯಕ್ಕೆ ಬಂದ ನಂತರ ನಮೂನೆ 6-10 ರಂತೆ ಅಳತೆ ಕೆಲಸಕ್ಕೆ ಕಡತ ವಿತರಿಸಬೇಕಾಗುತ್ತದೆ. ಎನ್ನುವ ವರದಿ ಸಲ್ಲಿಸಿದ್ದಾರೆ. ಆದ್ದರಿಂದ ಗೌರವಾನ್ವಿತರ ಆದೇಶದಂತೆ ತಹಶೀಲ್ದಾರ್ ರವರು ಎ.ಸಿ., ರಾಮನಗರ ತಾಂತ್ರಿಕ ಸಹಾಯಕರು ಡಿ.ಸಿ ರವರ ಕಛೇರಿ ಇವರನ್ನೆಲ್ಲ ಎದುರುದಾರರನ್ನಾಗಿ ಸೇರಿಸಿಕೊಳ್ಳಲಾಗಿದೆ 2 ಮತ್ತು 5ನೇ ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಲಿಲ್ಲ 4ನೇ ಎದುರುದಾರರು ನಮೂನೆ 1 -5 ಉಚಿತ ದ್ವಾರದ ಮೂಲಕ ಈವರಗೆ ಸ್ವೀಕೃತಗೊಂಡಿಲ್ಲ ಈ ಬಗ್ಗೆ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡಿಲ್ಲ ಸರ್ಕಾರದ ಸುತ್ತೋಲೆಗಳಂತೆ ಅಳತೆ ನಿರ್ವಹಿಸಿ ಅಂತಿಮವಾಗಿ ಆಕಾರ್ ಬಂದ್ ದುರಸ್ತಿ ಪಡಿಸಲಾಗುತ್ತದೆ ಅಂತ ತಿಳಿಸುತ್ತಾರೆ. 3ನೇ ಎದುರುದಾರರು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಈಗಾಗಲೇ ವರದಿ ಸಲ್ಲಿಸಿದ್ದಾರೆ. ನಮೂನೆ 1-5ಅನ್ನು ತಹಶೀಲ್ದಾರ್ ರವರು ತಯಾರಿಸಿದ್ದು ಇತ್ತೀಚಿನ ಸರ್ಕಾರಿ ಸುತ್ತೋಲೆಯಂತೆ ತಹಶೀಲ್ದಾರ್ ರವರ ಹಂದಲ್ಲಿಯೇ ಪೋಡಿ ದುರಸ್ತಿಗೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಆದ್ದರಿಂದ ತಹಶೀಲ್ದಾರ್ ರವರಿಗೆ ನಿರ್ದೇಶನಕೊಡಲಾಗಿದೆ ಅಂತ ತಿಳಿಸುತ್ತಾರೆ.

4. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಸ. ನಂ; 257 ಈಗಲೂ ಸಹ ರಿ. ದುರಸ್ತಿ ಆಗಿಲ್ಲ ಸಾರ್ವಜನಿಕರಿಗೆ ಗೊಬ್ಬರ ಸಾಗಿಸಲು ದವಸ ಧಾನ್ಯ ತೆಗೆದುಕೊಂಡು ಹೋಗಲು ಎಲ್ಲದಕ್ಕೂ ರಸ್ತೆಯೇ ಆಧಾರವಾಗಿದ್ದು ಪಕ್ಕದಲ್ಲಿರುವ ಬೆಟ್ಟ ರಣ ಹದ್ದುಗಳ ಪಕ್ಷಿದಾಮವೆಂದು ಘೋಷಣೆಯಾಗಿದೆ. ಅರಣ್ಯ ಇಲಾಖೆಯವರು ಸಹ ಈ ರಸ್ತೆಯ ಮೂಲಕವೇ ಕಾಡಿಗೆ ಹೋಗಿ ಬರಬೇಕಾಗಿದೆ ಆದ್ದರಿಂದ ಜಿಲ್ಲಾಧಿಕಾರಿಗಳ ಆಧೇಶದಂತೆ ಮೀಸಲಿಟ್ಟಿರುವ ರಸ್ತೆ ಅನುಷ್ಠಾನಗೊಳಿಸಿಕೊಡುವಂತೆ ಕೋರಿಕೊಂಡಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಸ. ನಂ: 119ರ ಗೋಮಾಳದ ಪ್ರದೇಶದಲ್ಲಿ ಸ. ನಂ; 257 ದುರಸ್ತಿಯಾಗಬೇಕಾದ ವಿಷಯದ ಬಗ್ಗೆ ಉಪಲೋಕ್ ಬಿಡಿ 78/10 ಡಿ.ಆರ್.ಇ –1 ಶಾಖೆಯಲ್ಲಿ ಇತ್ತು ಎನ್ನುವುದು 2ನೇ ಎದುರುದಾರರು ಸಲ್ಲಿಸಿರುವ ತಕರಾರುಗಳಿಂದ ತಿಳಿಯುತ್ತದೆ. ರಸ್ತೆಯನ್ನು ಬಿಟ್ಟು ಹೊಸದಾಗಿ ದುರಸ್ತಿ ಮಾಡುವಂತೆ ಆದೇಶಿಸಿರುವುದು ರಾಮನಗರ ತಹಶೀಲ್ದಾರ್ ರವರಿಗೆ ತಿಳಿದಿದೆ ಆ ಹಂತದಲ್ಲಿ ಹೊಸ ಸ. ನ:257 ಶಿವಣ್ಣ ಎನ್ನುವವರಿಗೆ ಮಂಜೂರಾದ 2ಎ., ರದ್ದು ಪಡಿಸಿದ್ದಾರೆ. ದಿ: 3.6.2011ರಂದು ಸದರಿ ಪ್ರಕರಣ ಬಿ.ಡಿ. 78/10 ಮುಕ್ತಾಯಗೊಂಡಿದೆ. ದೂರುದಾರರು ಕೋರಿಕೊಳ್ಳುತ್ತಿರುವುದು ರಸ್ತೆ 20 ಅಡಿ ಯಷ್ಟು ರಸ್ತೆಯನ್ನು ಬಿಟ್ಟು ಸ. ನಂ: 257ಅನ್ನು ದುರಸ್ತಿ ಮಾಡಲು ಜಿಲ್ಲಾಧಿಕಾರಿಗಳ ಆದೇಶವಾಗಿರುವುದು ದಿ: 29.1.2011ರಂದು ಆದರೆ ಇಲ್ಲಿಯವರೆಗೂ ರಸ್ತೆಯನ್ನು ಗುರುತಿಸಿ ದುರಸ್ತಿ ಮಾಡುವ ಕೆಲಸ ಆಗಿಲ್ಲ 3ನೇ ಎದುರುದಾರರಾದ ಎ.ಸಿ. ರಾಮನಗರ ಇವರು ಹೇಳುವ ಪ್ರಕಾರ ಈಗ ತಹಶೀಲ್ದಾರ್ ರವರೇ ದುರಸ್ತಿ ಕಾರ್ಯವನ್ನು ಮಾಡಬಹುದಾಗಿದೆ. ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರಿಗೆ ಅನುಬಂಧ 1 ರಿಂದ 5 ಬಂದಿಲ್ಲ ಎಂದು ಹೇಳುವುದು ಸರಿಯಾಗಿದೆ. ಏಕೆಂದರೆ ತಹಶೀಲ್ದಾರ್ ರವರ ಹಂತದಲ್ಲಿಯೇ ಕ್ರಮ ವಹಿಸಲು, ಸರ್ಕಾರಿ ಸುತ್ತೋಲೆಯಂತೆ ಎ.ಸಿ., ರವರು ನಿರ್ದೇಶನ ಕೊಟ್ಟಿದ್ದಾರೆ. ಆದ್ದರಿಂದ ~~ಗೌರವಾನ್ವಿತರು ಅನುಮತಿಸಿದ~~ಲ್ಲಿ 2ನೇ ಎದುರುದಾರರಾದ ತಹಶೀಲ್ದಾರ್ ರಾಮನಗರ ಇವರಿಗೆ ನಿರ್ದೇಶನ ಕೊಟ್ಟು ಎ.ಸಿ., ರವರ ಆಧೇಶದಂತೆ ಮತ್ತು ಹೊಸ ಸರ್ಕಾರಿ ಸುತ್ತೋಲೆಯಂತೆ ಸ. ನಂ: 119ರ ಮತ್ತು 257ರ ಪೋಡಿ ದುರಸ್ತಿ ಕಾರ್ಯ ನಿರ್ವಹಿಸುವಂತೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ

ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 2/3/17.
(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.